# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮವೂ ಒಂದು ವಿಜ್ಞಾನ

ಕೋ. ಚೆನ್ನಬಸಪ್ಪ

**ಸ್ವಾಮಿ ವಿವೇಕಾನಂದರ ಪ್ರಕಾರ ನಿಜವಾದ ಧರ್ಮ ಯುಕ್ತಿಯ ಪರೀಕ್ಷೆಗೆ ನಿಲ್ಲುತ್ತದೆ. ಧರ್ಮದಲ್ಲಿ ಕೂಡ ವೈಜ್ಞಾನಿಕ ಅನ್ವೇಷಣೆಯ ಹಾಗೆ ಕೇವಲ ಅನುಭವವೇದ್ಯವೇ ಅಂತಿಮ ಪ್ರಮಾಣ. ಈ ಬಗ್ಗೆ ಸ್ವಾಮೀಜಿಯವರ ವಿಚಾರಗಳನ್ನು ಸುಪ್ರಸಿದ್ಧ ಸಾಹಿತಿಗಳೂ, ನಿವೃತ್ತ ನ್ಯಾಯಾಧೀಶರೂ ಆದ ಶ್ರೀ ಕೋ. ಚೆನ್ನಬಸಪ್ಪನವರು ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.**



"ಧಾರ್ಮಿಕ ಸತ್ಯದ ಏಕಮಾತ್ರ ಪ್ರಮಾಣವೇ ಆ ಅನುಭವ ನನಗೆ ಪ್ರಾಪ್ತವಾಗಿದೆಯೇ ಎಂದು ಪರೀಕ್ಷಿಸಿಕೊಳ್ಳುವುದು. ಪ್ರತಿಯೊಬ್ಬನೂ ಅದನ್ನು ತನ್ನ ಜೀವದಲ್ಲಿ ಹೋಲಿಸಿ ನೋಡಿಕೊಳ್ಳಬೇಕು. 'ನಾನು ನೋಡಿರುವೆ, ಆದರೆ ನಿನಗೆ ಅದು ಸಾಧ್ಯವಿಲ್ಲ' ಎಂದು ಹೇಳುವ ಯಾವ ಗುರುವನ್ನೂ ನಂಬಕೂಡದು. ಯಾರು 'ನೀವೂ ಕೂಡ ಅದನ್ನು ನೋಡಬಹುದು' ಎನ್ನುತ್ತಾರೆಯೋ ಅವನನ್ನು ಮಾತ್ರ ನಂಬಬೇಕು" (ಕೃತಿಶ್ರೇಣಿ, ೧. ೨೪೫).

## ವಿಜ್ಞಾನ ಎಂದರೇನು?

ಮಾಗಿ ಹಣ್ಣಾದ ಸೇಬು ತೊಟ್ಟು, ಕಳಚಿ ಮರದಿಂದ ಭೂಮಿಯ ಮೇಲೆ ಬಿದ್ದುದನ್ನು ಕಂಡ ಐಜಾಕ್ ನ್ಯೂಟನ್‌ಗೆ ಆ ಹಣ್ಣು ಕೆಳಗೆ ಏಕೆ ಬಿತ್ತು, ಎಂಬ ಜಿಜ್ಞಾಸೆ ಉಂಟಾಯ್ತು. ಹಾಗೆಯೇ ಎಲ್ಲ ವಸ್ತುಗಳೂ ಮೇಲಿನಿಂದ ಕೆಳಕ್ಕೇ ಬೀಳುವುದೇಕೆ? ಮೇಲಕ್ಕೆ ಹಾರಿ ಹೋಗುವುದಿಲ್ಲವಲ್ಲ? ಇದನ್ನು ಕುರಿತು ನ್ಯೂಟನ್ ಆಲೋಚಿಸಿದ, ಕೊನೆಗೆ 'ಗುರುತ್ವಾಕರ್ಷಣೆ' ಎಂಬ ಸಿದ್ಧಾಂತಕ್ಕೆ ಬಂದ. ಈ ವೈಜ್ಞಾನಿಕ ಸಿದ್ಧಾಂತದ ಪ್ರಕಾರ ಎಲ್ಲ ವಸ್ತುಗಳೂ ಎಲ್ಲ ಕಾಲದಲ್ಲೂ ಎಲ್ಲ ದೇಶದಲ್ಲೂ ಕೆಳಗೆ ಬೀಳಲೇಬೇಕು. ಈ ಮಾತಿಗೆ ಹೊರತಿಲ್ಲ. ಯಾರು ಬೇಕಾದರೂ ಪ್ರಯೋಗ ಮಾಡಿ ದಿಟಪಡಿಸಿಕೊಳ್ಳಬಹುದು. ಇಂಗ್ಲೆಂಡಿನ ಸರ್ ಐಜಾಕ್ ರೂಪಿಸಿದ ಈ ಸಿದ್ಧಾಂತ ಭಾರತದಲ್ಲಿಯೂ ಸತ್ಯ, ಜಗತ್ತಿನ ಇನ್ನಾವ ದೇಶದಲ್ಲಿ ಪರೀಕ್ಷಿಸಿದರೂ ಸತ್ಯ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ವಾಸಿಸುವ ಅಷ್ಟೇನೂ ಪ್ರಬುದ್ಧರಲ್ಲದ ಮಾನವರು ಕೂಡ ಅಲ್ಲಿರುವ ತೆಂಗಿನ ಮರಗಳಿಂದ ಕಾಯಿ ಉದುರುವುದನ್ನು ನೋಡಿದಾಗ ನ್ಯೂಟನ್ ಸಿದ್ಧಾಂತದ ಸಾರ್ವತ್ರಿಕ ಸಾರ್ವಕಾಲಿಕ ಸತ್ಯ ದಿಟವಾಗುತ್ತದೆ. ಇದು ವೈಜ್ಞಾನಿಕ ಸತ್ಯ.

ಕಳೆದ ಶತಮಾನದ ಆದಿಯಲ್ಲಿ ರೈಟ್ ಸೋದರರು, ಭಾರವಾದ ವಿಮಾನ ಭೂಮಿಯಿಂದ ಮೇಲಕ್ಕೆ ಹಾರಿಸುವ ಯಂತ್ರ ಕಂಡುಹಿಡಿದಾಗ ಜನ ನಂಬಲಾರದೆ ಹೋದರು. ಪತ್ರಕರ್ತರನ್ನು ವಿಮಾನ ನಿಲ್ದಾಣಕ್ಕೆ ಕರೆದೊಯ್ದು, ರೈಟ್ ಸೋದರರು ವಿಮಾನ ಹಾರಿಸಿದಾಗ ಅವರು ಬೆರಗಾಗಿ ಹೋದರು. ಆಗ ರೈಟ್ ಸೋದರರು ಭಾರವಾದ ವಾಹನವನ್ನು ಮೇಲಕ್ಕೆ ಹಾರಿಸುವ ವಿಜ್ಞಾನಸಿದ್ಧಿಯನ್ನು ವಿವರಿಸಿದರು. ಆ ವಿಜ್ಞಾನ ಸಿದ್ಧಿ ಈಗ ದಿನನಿತ್ಯದ ಸಂಗತಿಯಾಗಿದೆ. ಆಟಂ ಬಾಂಬ್, ಹೈಡ್ರೋಜನ್ ಬಾಂಬ್.....ಇತ್ಯಾದಿ ಅಸ್ತ್ರಗಳೂ ವಿಜ್ಞಾನಸಿದ್ಧಿಯ ಫಲ. ಐನ್‌ಸ್ಟೈನ್ ಮೊಟ್ಟಮೊದಲು ಅಣುಬಾಂಬುಗಳ ವಿಜ್ಞಾನಸೂತ್ರವನ್ನು ಕಂಡುಹಿಡಿದರೂ ಆ ಸೂತ್ರವನ್ನು ಅನುಸರಿಸಿದ ಭಾರತೀಯರು, ಪಾಕಿಸ್ತಾನೀಯರು ಆಟಂ ಬಾಂಬುಗಳನ್ನು ತಯಾರಿಸಿದ್ದಾರೆ. ಮೇಲಿನ ಮಾತುಗಳ ಒಟ್ಟು ಸಾರಾಂಶ : ಕೆಲವು ನಿಶ್ಚಿತ ನಿಯಮಗಳು ಸನ್ನಿವೇಶಗಳು ಇದ್ದಾಗ ಇಂಥ ಪರಿಣಾಮ ಉಂಟಾಗಿಯೇ ಆಗುತ್ತದೆ. ಕಾರ್ಯಕಾರಣ ಸಂಬಂಧ ಇದ್ದೇ ಇರುತ್ತದೆ. ಇಂಥ ಪರಿಣಾಮ ಆಗಿದೆ ಎಂದರೆ ಅದಕ್ಕೆ ಇದೇ ಕಾರಣ ಎಂದು ನಿಶ್ಚಿತವಾಗಿ, ಲವಲೇಶವೂ ತಪ್ಪಿಲ್ಲದೆ ವಿವರಿಸುತ್ತದೆ ವಿಜ್ಞಾನ.

ಖಗೋಳಶಾಸ್ತ್ರವೂ ಪರಿಪೂರ್ಣ ವಿಜ್ಞಾನ. ಇಂಥಾ ದಿನವೇ ಚಂದ್ರಗ್ರಹಣ, ಸೂರ್ಯಗ್ರಹಣ ಉಂಟಾಗುತ್ತದೆ; ಇಂಥಾ ದಿನಾಂಕ ಇಷ್ಟೇ ಹೊತ್ತಿನಲ್ಲಿ ಸೂರ್ಯ ಹುಟ್ಟುತ್ತಾನೆ, ಮುಳುಗುತ್ತಾನೆ.... ಎಂಬಿತ್ಯಾದಿ ಸಂಗತಿಗಳು ಒಂದು ಕೂದಲೆಳೆಯಷ್ಟೂ ತಪ್ಪಿಲ್ಲದೆ ಘಟಿಸುತ್ತವೆ. ಇದು ಖಚಿತ ವಿಜ್ಞಾನ (Exact Science).

> ಏಕತೆಯೇ ದೇವರು. ಅವನು ಎಲ್ಲದರ ಏಕತೆ. ಎಲ್ಲ ಜೀವಿಗಳ, ಎಲ್ಲ ಅಸ್ತಿತ್ವದ ಸತ್ಯವೇ ಅವನು.
>
> — *ಸ್ವಾಮಿ ವಿವೇಕಾನಂದ*

## ಧರ್ಮ ಎಂದರೇನು?

ಧರ್ಮ ಎಂದೊಡನೆ ಯಾವ ಧರ್ಮ ಎಂಬ ಸಂದೇಹ, ಪ್ರಶ್ನೆ ಎದುರಾಗುತ್ತದೆ. ರಾಜಧರ್ಮ, ಪ್ರಜಾಧರ್ಮ, ಗೃಹಸ್ಥ ಧರ್ಮ, ಸಂನ್ಯಾಸಿ ಧರ್ಮ.... ಇತ್ಯಾದಿ ಇತ್ಯಾದಿ ಅನೇಕಾನೇಕ ಧರ್ಮಗಳ ಪರಂಪರೆ ಕಣ್ಮುಂದೆ ಬರುತ್ತದೆ. ಇಲ್ಲಿ ನಾವು ವಿಚಾರಿಸಬೇಕಾಗಿರುವುದು ಈ ಖಂಡಧರ್ಮಗಳ ಸಂಗತಿಯನ್ನಲ್ಲ ಎಂಬುದನ್ನು ಮೊದಲೇ ಸ್ಪಷ್ಟೀಕರಿಸಬೇಕು. ಈ ಎಲ್ಲ ಖಂಡಧರ್ಮಗಳಿಗೂ ಮೂಲವಾದ ಮಾತೃಸದೃಶವಾದ ಅಖಂಡಧರ್ಮದ ವಿಚಾರವಾಗಿ ಪ್ರಸ್ತಾಪಿಸಬೇಕಾಗಿದೆ. ಆ ಅಖಂಡ ಮೂಲ ಮಾತೃಧರ್ಮವನ್ನು ತಿಳಿದಮೇಲೆ ಈ ಖಂಡಧರ್ಮಗಳನ್ನು ತಿಳಿಯಬೇಕಾದ ಅಗತ್ಯವಿಲ್ಲ. ಈ ಸತ್ಯವನ್ನು ಉಪನಿಷತ್ ಋಷಿವರೇಣ್ಯರು "ಯಾವುದನ್ನು ತಿಳಿದಮೇಲೆ ಇನ್ನು ತಿಳಿಯಬೇಕಾದ್ದು ಏನೂ ಉಳಿದಿಲ್ಲವೊ ಅದನ್ನು ತಿಳಿ" ಎಂಬ ಉಪನಿಷತ್‌ವಾಣಿಯಲ್ಲಿ ಘೋಷಿಸಿದ್ದಾರೆ. ಹಾಗಾದರೆ ತಿಳಿಯಬೇಕಾದ ಆ ಮೂಲ ಸತ್ಯ ಸಂಗತಿ ಯಾವುದು? ಏನು? ಯಾವುದರದು? ಅದನ್ನು ಯಾವ ಶಬ್ದದಿಂದಲೂ, ಮಾತಿನಿಂದಲೂ ವರ್ಣಿಸಲು ಬಾರದು. ಅದು ಅವರ್ಣನೀಯ. ಅದರ ನಿರ್ವಚನ ಅಸಾಧ್ಯ. ಶ್ರೀರಾಮಕೃಷ್ಣರ ಸರಳ ಮಾತಿನಲ್ಲಿ: "ಎಂಜಲಾಗದೆ ಇರುವುದು ಅದೊಂದೇ " ಅಂದರೆ ಅದನ್ನು ನಾಲಗೆಯಿಂದ ಯಾರೂ ನುಡಿದಿಲ್ಲ. ಅದನ್ನೇ "ಬ್ರಹ್ಮ" ಎಂದು ಕರೆದರು. ಅದನ್ನು ಅರಿಯಲು, ಅನುಭವಿಸಲು, ಅದೇ ತಾನಾಗಲು ಅನುಸರಿಸಬೇಕಾದ ವಿಧಿ, ವಿಧಾನ, ಸಾಧನೆ, ಯಂತ್ರ, ತಂತ್ರ, ಮಂತ್ರ ಮುಂತಾದ ಸಲಕರಣೆಗಳ ವಿಚಾರವಾಗಿ ರೂಪುಗೊಂಡ ಸಮಷ್ಟಿವಿಜ್ಞಾನವೇ "ಧರ್ಮ" ಎಂದು ಭಾವಿಸಬಹುದು. ಆ ವಿಜ್ಞಾನ ಸೂತ್ರಗಳನ್ನು ಹಿಡಿದು ಸಾಧನೆ ಮಾಡಿ ಸಿದ್ಧಿಪಡೆದ ಸತ್ಯ : ಸರ್ವಂ ಖಲ್ವಿದಂ ಬ್ರಹ್ಮ. ನಮ್ಮ ಉಪನಿಷತ್ ಋಷಿ ವಿಜ್ಞಾನಿಗಳು ಕಂಡುಕೊಂಡ ಇದು, ನ್ಯೂಟನ್ ಕಂಡುಕೊಂಡ "ಗುರುತ್ವಾಕರ್ಷಣೆ" ಸತ್ಯದಂತೆಯೇ, ಸಾರ್ವಕಾಲಿಕ ಸಾರ್ವತ್ರಿಕ ವೈಜ್ಞಾನಿಕ ಸತ್ಯ.

"ಧರ್ಮ" ಎಂಬ ಈ ಮಾತನ್ನು ಇತರ ಯಾವ ಭಾಷೆಗೂ ಯಥಾವತ್ತಾಗಿ ತರ್ಜುಮೆ ಮಾಡಲು ಸಾಧ್ಯವಿಲ್ಲ ಎಂದು ಒಪ್ಪಿಕೊಳ್ಳಲಾಗಿದೆ. ಆದರೂ ಅದಕ್ಕೆ ಸ್ವಲ್ಪವಾದರೂ ಹತ್ತಿರವಾದ ಶಬ್ದ, Religion (ರಿಲಿಜನ್). ಈ ಇಂಗ್ಲಿಷ್ ಶಬ್ದ Religare ಎಂಬ ಗ್ರೀಕ್ ಶಬ್ದದ ತದ್ಭವ. ಇದರ ಅರ್ಥ to tie back, to tie again, Re ಮತ್ತೊಮ್ಮೆ — Regain, Redo, Retold, Rewrite ಮುಂತಾದ ಶಬ್ದಗಳಲ್ಲಿರುವ Re ಎಂಬುದು ಉಪಸರ್ಗ. ಇಲ್ಲಿ Religion ಎಂದರೆ "ಮತ್ತೆ ಕೂಡಿಸು" "ಮರಳಿ ಜೋಡಿಸು" ಎಂಬ ಅರ್ಥ ಬರುತ್ತದೆ. ಯಾವುದನ್ನು ಯಾವುದರೊಡನೆ ಮತ್ತೆ ಕೂಡಿಸುವುದು? ಹಿಂದೆ ಒಂದಾಗಿದ್ದುದು, ಈಗ ಬೇರೆ ಬೇರೆ ಆಗಿದೆ. ಬೇರೆ ಬೇರೆ ಆಗಿರುವುದನ್ನು ಮತ್ತೆ ಒಂದುಗೂಡಿಸುವುದು Religion. ಅಂದರೆ ಯೋಗವಿದ್ಯೆ ಎಂದಾಯ್ತು. "ಯೋಗ" ಎಂಬ ಮಾತಿನ ಮೂಲಧಾತು "ಯುಜ್". ಅದನ್ನು ಭಾಷಾ ದೃಷ್ಟಿಯಿಂದ ಎಳೆಎಳೆಯಾಗಿ ಬಿಡಿಸದೆ ನಿಜಗುಣ ಶಿವಯೋಗಿಗಳ ಸರಳ ಮಾತಿನಲ್ಲಿ: "ಹೋರಾಟವಿಕ್ಕಿಸಲು ಬೇರಾದೆಯಲ್ಲದೆ, ಬೇರುಂಟೆ ಜಗದೊಳಗೆ ಎಲೆ ದೇವನೆ?" ಎಂಬ ಮಾತಿನಿಂದ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು.

## ಧರ್ಮವಿಜ್ಞಾನಿ ಸ್ವಾಮೀಜಿ

"ಸರ್ವವಸ್ತುಗಳೂ ಕೆಳಗಿಳಿದು ಬೀಳುತ್ತವೆ" ಎಂಬ ಗುರುತ್ವಾಕರ್ಷಣೆಯ ಭೌತವಿಜ್ಞಾನ ಸತ್ಯದಂತೆಯೇ "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಧರ್ಮವಿಜ್ಞಾನ ಸೂತ್ರವೂ ಸಾರ್ವತ್ರಿಕ ಸಾರ್ವಕಾಲಿಕ ಸತ್ಯ. ಇದು ದಿಟವೆ ಸಟೆಯೆ ಎಂಬುದನ್ನು ಯಾರು ಬೇಕಾದರೂ ಎಲ್ಲಿ ಬೇಕಾದರೂ ಪ್ರಯೋಗ ಮಾಡಿ ಖಚಿತಪಡಿಸಿಕೊಳ್ಳಬಹುದು. ಬ್ರಹ್ಮಾಂಡದಲ್ಲಿರುವ ಸರ್ವಸಮಸ್ತವೂ ನಿಶ್ಚಯವಾಗಿಯೂ, ಒಂದೇ ಸದ್ವಸ್ತುವೆ ಎಂಬುದನ್ನು ಯಾರು ಬೇಕಾದರೂ ದಿಟಪಡಿಸಿಕೊಳ್ಳಬಹುದು. ಧರ್ಮಶಾಸ್ತ್ರದಲ್ಲಿ ಸತ್ಯಸಾಕ್ಷಾತ್ಕಾರ ಆಗಿದೆ ಎಂಬುದರ ಅರ್ಥ ದಿಟಪಡಿಸಿಕೊಳ್ಳುವುದು ಎಂದು. Realize ಎಂದರೆ to make real– ಸೂತ್ರದಲ್ಲಿದ್ದ ಸತ್ಯವನ್ನು ನಿಜವಾಗಿಸಿಕೊಳ್ಳುವುದು ಎಂದು. ಸ್ವಾಮೀಜಿ ಸರ್ವಂ ಖಲ್ವಿದಂ ಬ್ರಹ್ಮ ಎಂಬ ಧಾರ್ಮಿಕ ವಿಜ್ಞಾನಸತ್ಯವನ್ನು ನಿಜವೆನಿಸಿಕೊಂಡಿದ್ದರು ಅಂದರೆ ಅನುಭವಿಸಿದ್ದರು, ತಮ್ಮದನ್ನಾಗಿ ಮಾಡಿಕೊಂಡಿದ್ದರು.

ಸ್ವಾಮೀಜಿ ಜರ್ಮನಿಗೆ ಹೋಗಿದ್ದಾಗ ಮಹಾಸಂಸ್ಕೃತ ವಿದ್ವಾಂಸ ವೇದವಿದ ಮ್ಯಾಕ್ಸ್ ಮುಲ್ಲರ್ ಮಹಾಶಯನನ್ನು ಭೇಟಿಯಾಗಿದ್ದರು. ಆಗ ಮ್ಯಾಕ್ಸ್ ಮುಲ್ಲರ್, ತಾವು ರಚಿಸಿದ್ದ ಒಂದು ಸಂಸ್ಕೃತ ಪದ್ಯವನ್ನು ಓದಿ ಹೇಳಿದರು. ಮರುದಿನ ಇಬ್ಬರೂ ವಾಯುವಿಹಾರಕ್ಕಾಗಿ ಹೋದಾಗ, ಮಾತಿಗೆ ಮಾತು ಬಂದು ಸ್ವಾಮೀಜಿ ನಿನ್ನೆ ಮ್ಯಾಕ್ಸ್ ಮುಲ್ಲರ್ ಒಮ್ಮೆ ಓದಿ ಹೇಳಿದ್ದ ಪದ್ಯವನ್ನು ಇದ್ದಕ್ಕಿದ್ದ ಹಾಗೇ ಒಪ್ಪಿಸಿಬಿಟ್ಟರು. ಸ್ವಾಮೀಜಿಯ ಸ್ಮರಣಶಕ್ತಿಯನ್ನು ಕಂಡು ಬೆರಗಾದ ಮ್ಯಾಕ್ಸ್ ಮುಲ್ಲರ್: "ಇದು ಹೇಗೆ ಸಾಧ್ಯವಾಯಿತು ಸ್ವಾಮೀಜಿ?" ಎಂದು ಕೇಳಿದರು. ಆಗ ಸ್ವಾಮೀಜಿ ನಕ್ಕು: "ಆ ಕವಿತೆಯ ಕರ್ತೃ ನಾನೇ" ಎಂದುಬಿಟ್ಟರು. ಮ್ಯಾಕ್ಸ್ ಮುಲ್ಲರ್‌ಗೆ ದಿಗ್ಭ್ರಮೆಯಾಯ್ತು! "ನಾನು ಬರೆದ ಕವಿತೆಯ ಕರ್ತೃ ನೀವೆಂದು ಹೇಳುತ್ತೀರಲ್ಲ! ಹೇಗೆ?" ಎಂದು ಪ್ರಶ್ನಿಸಿದರು. ಅದಕ್ಕೆ ಸ್ವಾಮೀಜಿ ಗಂಭೀರವಾಗಿ ಉತ್ತರ ಕೊಟ್ಟರು: "ನಾನೂ ನೀವೇ; ನೀವೂ ನಾನೇ. ನನ್ನಲ್ಲಿರುವುದೇ ನಿಮ್ಮಲ್ಲೂ ಇದೆ. ನಿಮ್ಮಲ್ಲಿರುವುದೂ ನನ್ನಲ್ಲಿಯೂ ಇದೆ.

**ಈ ವ್ಯಕ್ತಿ (ಸ್ವಾಮಿ ವಿವೇಕಾನಂದರು) ತನ್ನ ಅನುಭವದಿಂದ ಮಾತನಾಡುತ್ತಿರುವರು, ಯಾರೋ ಹೇಳಿರುವುದನ್ನು ಉಚ್ಚರಿಸುತ್ತಿಲ್ಲ ಎಂದು ನನ್ನ ಹೃದಯಾಂತರಾಳಕ್ಕೆ ವೇದ್ಯವಾಯಿತು. ಅವರಿಗೆ ಗ್ರಂಥಗಳ ಅರಿವಿತ್ತು, ಆದರೆ ಅದಕ್ಕಿಂತ ಹೆಚ್ಚಾಗಿ ತಮ್ಮ ಅನುಭವದ ಅರಿವಿತ್ತು.** *– ವಿಲಿಯಂ ಅರ್ನೆಸ್ಟ್ ಹಾಕಿಂಗ್*

'ನಾನು' ' ನೀವು' ಬೇರೆ ಬೇರೆ ಎಂದು ಎಲ್ಲಿಯವರೆಗೆ ಭಾವಿಸುತ್ತೇವೆಯೋ ಅಲ್ಲಿಯವರೆಗೆ "ನಾನು" "ನನ್ನದು" ಎಂಬ ಭೇದ ಭಾವ. ಆ ಭೇದ ಭಾವ ಅಳಿದಾಗ ಅಭೇದ ಭಾವ...." ಆದ್ದರಿಂದ ಮ್ಯಾಕ್ಸ್‌ಮುಲ್ಲರ್ ಎಂಬ ನಾಮ ರೂಪಗಳ ಹಿಂದಿರುವ "ಆತ್ಮ"ಕ್ಕೆ ಯಾವ ನಾಮರೂಪವೂ ಇಲ್ಲ. ಆ ಆತ್ಮದ ಸಾಕ್ಷಾತ್ಕಾರ ಸ್ವಾಮೀಜಿಗೆ ಆಗಿತ್ತು. ಈ ಆತ್ಮಸಾಕ್ಷಾತ್ಕಾರ ಎಲ್ಲರಿಗೂ ಸಾಧ್ಯ. ಅದನ್ನೇ ಸ್ವಾಮೀಜಿ ಹೇಳುತ್ತಾರೆ: "ಒಬ್ಬರಿಗೆ ಸಾಧ್ಯವಾದದ್ದು ಯಾರಿಗಾದರೂ ಸಾಧ್ಯ, ಎಲ್ಲರಿಗೂ ಸಾಧ್ಯ."

ಸಾಧನೆಯಿಂದ ಇದು ಸಿದ್ಧಿಯಾಗುತ್ತದೆ.

ಸ್ವಾಮಿ ವಿವೇಕಾನಂದರು ಹೇಳಿದಂತೆ ಈ ರೀತಿ ಎಲ್ಲರಲ್ಲೂ ಅದನ್ನು (ತತ್) ನೋಡುವುದು, ತನ್ನಲ್ಲಿಯೇ ಎಲ್ಲರನ್ನೂ ನೋಡುವುದು ಸಾಧ್ಯ. ಆದರೆ ಹೇಗೆ? ಹೇಗೆಂದರೆ ಸಾಧನೆ ಮಾಡಿ ನೋಡಬೇಕು. ಶ್ರೀರಾಮಕೃಷ್ಣರು ಹೇಳುವಂತೆ, ಕೇವಲ ಗಾಂಜಾ ಗಾಂಜಾ ಎಂದು ಬಾಯಿಂದ ಕೂಗಿಕೊಂಡರೆ ಗಾಂಜಾದ ಮತ್ತು ಬರುವುದಿಲ್ಲ, ಗಾಂಜಾ ಸೊಪ್ಪು ತಿಕ್ಕಿ ಚಿಲುಮೆಯಲ್ಲಿ ಹಾಕಿ ಕಡ್ಡಿ ಕೊರೆದು ಬತ್ತಿ ಹತ್ತಿಸಿ "ದಮ್" ಎಳೆಯಬೇಕು. ಹಾಗಾದರೆ ಗಾಂಜಾ ಮತ್ತಿನ ಅನುಭವ ಆದೀತು. ಹಾಗೆಯೇ ಸರ್ವಂ ಖಲ್ವಿದಂ ಬ್ರಹ್ಮ ಎಂದು ಜಪಿಸಿದರೆ ಅದು ಮಹಲಿಂಗರಂಗನ ಮಾತಿನಲ್ಲಿ "ಬಾಯಬ್ರಹ್ಮ" ವಾದೀತು, ವಾಸ್ತವವಾಗಿ ಅನುಭವ ಆಗುವುದಿಲ್ಲ. ಹೇಗೆ ಮಾಡಿದರೆ ಅನುಭವ ಆದೀತು? ಗಾಂಜಾ ಸೊಪ್ಪು, ಚಿಲುಮೆ, ಬೆಂಕಿ ಕಡ್ಡಿ ಬೇಕಾದಂತೆ, ಬ್ರಹ್ಮನ ಅಮಲು ಹತ್ತಬೇಕಾದರೂ ಪರಿಕರಗಳು, ಸಲಕರಣೆಗಳು, ಬೇಕು. ಯಾವುವು ಆ ಸಲಕರಣೆ?

ಸ್ವಾಮೀಜಿ ಹೇಳುತ್ತಾರೆ—ಆಧ್ಯಾತ್ಮಿಕ ಸಾಧಕನಿಗೆ ಇರುವ ಏಕಮಾತ್ರ ಉಪಕರಣ "ಮನಸ್ಸು". ಆ ಮನಸ್ಸು ಸಿದ್ಧವಾಗಬೇಕು; ಪರಿಪಕ್ವವಾದ ಪರಿಶುದ್ಧವಾದ ಕನ್ನಡಿಯಂತೆ ನಿರ್ಮಲವಾದ ಮನಸ್ಸು ಬ್ರಹ್ಮವಿದ್ಯಾಸಾಧನೆಗೆ ಬೇಕಾದ ಪ್ರಥಮ, ಅನಿವಾರ್ಯವಾದ ಆವಶ್ಯಕತೆ. ಮನಸ್ಸನ್ನು ಶುದ್ಧೀಕರಿಸುವ ಪ್ರಥಮ, ಅಂತೆಯೇ ಅಂತ್ಯ ಪ್ರಯತ್ನದಿಂದಲೇ ಪ್ರಾರಂಭವಾಗಬೇಕು. ಮನಸ್ಸನ್ನು ಶುದ್ಧೀಕರಿಸುವುದೂ ಒಂದು ವಿಜ್ಞಾನವೇ ! ಮಲಿನ ನೀರನ್ನು ಶುದ್ಧೀಕರಿಸಲು ಮರಳು, ಇಜ್ಜಲು, ಇತ್ಯಾದಿ ಸಲಕರಣೆಗಳ ಮೂಲಕ ಸೋಸುವಂತೆ ಚಂಚಲ ಮನಸ್ಸನ್ನು, ಒಂದೆಡೆ ನಿಲ್ಲಿಸುವ ಯಂತ್ರ, ತಂತ್ರಗಳೂ ಉಂಟು. ಆ ಉಪಕರಣಗಳ ಉಪಾಯದಿಂದ ಮನಸ್ಸನ್ನು ಪರಿಶುದ್ಧಗೊಳಿಸಿ ಅದರಲ್ಲಿಯೇ "ಅದರ" ಪ್ರತಿಬಿಂಬವನ್ನು ಮೂಡಿಸಿಕೊಳ್ಳಬಹುದು. ಇದೂ ವೈಜ್ಞಾನಿಕ ಕ್ರಿಯೆಯೇ.

## ಧರ್ಮವೂ ಒಂದು ವಿಜ್ಞಾನ ಎನ್ನುತ್ತಾರೆ ಸ್ವಾಮೀಜಿ

ವಿಜ್ಞಾನ ಎಂದಮೇಲೆ ಅದಕ್ಕೂ ಉಪಕರಣಗಳು, ಆ ಉಪಕರಣವನ್ನು ಉಪಯೋಗಿಸುವ ಕ್ರಮ, ಅವುಗಳಿಂದ ಫಲಿಸುವ ಹಂತಹಂತವಾದ ಪರಿಣಾಮ, ಕೊಟ್ಟಕೊನೆಯ ಫಲ ಮುಂತಾದವುಗಳ ವಿವರಗಳು ಇರಬೇಕು. ಆದರೆ ಈ ಉಪಕರಣವು ಭೌತ ವಿಜ್ಞಾನಕ್ಕೆ ಬೇಕಾದ ಉಪಕರಣಗಳಂತೆ, ಕಣ್ಣಿಗೆ ಕಾಣುವ ಕೈಯಿಂದ ಮುಟ್ಟಿ ಅನುಭವಿಸುವ ಸಾಧನ ಸಲಕರಣೆಗಳಲ್ಲ. ಕಣ್ಣಿಗೆ ಕಾಣದೆ ಕೈಗೆ ಸಿಗದ ಕೊನೆಗೆ ಮನಸ್ಸಿಗೂ ನಿಲುಕದ ಆ "ತತ್"ಅನ್ನು ಅನುಭವಿಸಬೇಕಾದರೆ ಈ ಪಂಚೇಂದ್ರಿಯಗಳಾಗಲಿ, ಮತ್ತಾವ ಬಾಹ್ಯಭೌತಿಕ ಉಪಕರಣಗಳಾಗಲಿ ಹೆಚ್ಚು ಉಪಯೋಗಕ್ಕೆ ಬಾರವು. ಮನಸ್ಸೆಂಬ ಒಳಗಿರುವ ವಿಜ್ಞಾನಿ ದೇಹದೊಳಗಿರುವ ಬಾಹ್ಯ ಅಂತರಂಗ ಇಂದ್ರಿಯಗಳ ಮೂಲಕವಾಗಿಯೇ ತನ್ನೊಳಗಿರುವ ಆ ಯಾವುದೊ ಅಗೋಚರ ಶಕ್ತಿಯನ್ನು, ತಿದ್ದಬೇಕು, ತೀಡಬೇಕು, ಜಾಗ್ರತಗೊಳಿಸಬೇಕು. ಆಗ ಈ ಅಂಗವೇ ಪರಿವರ್ತನೆ ಆಗುತ್ತದೆ ಕೆಲವು ಮಟ್ಟಿಗೆ; ಇಂದ್ರಿಯಗಳಲ್ಲೂ ಬದಲಾವಣೆ ಆಗುತ್ತದೆ. ಇದನ್ನೆಲ್ಲ ಭೌತವಿಜ್ಞಾನದಂತೆ, ಪ್ರತ್ಯಕ್ಷಪ್ರಯೋಗ ಮಾಡಿ ಪ್ರದರ್ಶಿಸಲು ಬಾರದು. ಅದನ್ನು ಸಾಧಕನೆ ಸ್ವತಃ ಪ್ರಯೋಗಮಾಡಿ ಸ್ವಾನುಭವ ಪಡೆಯಬೇಕು. ತನ್ನೊಳಗಿರುವ ಆ ಅಗೋಚರಶಕ್ತಿಯನ್ನು ಜಾಗೃತಗೊಳಿಸಿ ಅನುಭವ ಪಡೆಯಬೇಕಾದರೆ ತಾನೇ ಪ್ರಯತ್ನಿಸಬೇಕಲ್ಲದೆ ಮತ್ತೊಬ್ಬರಿಂದ ಮಾಡಿಸುವುದಲ್ಲ. ಭೌತ-ವಿಜ್ಞಾನಿ ಅಣುಬಾಂಬ್ ತಯಾರಿಸಿ ಪ್ರಯೋಗಿಸಿ ತೋರಿಸಬಹುದು. ಆದರೆ ಅಧ್ಯಾತ್ಮ ವಿಜ್ಞಾನಿ ತನ್ನಲ್ಲಿಯೇ ಇರುವ ಅಣುಶಕ್ತಿಯ ಮಹಾಮಹಾಶಕ್ತಿಯನ್ನು ತಾನೇ ಕಂಡುಕೊಳ್ಳಬೇಕು. ಅಗತ್ಯ ಬಿದ್ದಾಗ ಲೋಕಹಿತಾರ್ಥವಾಗಿ ಪ್ರಯೋಗಿಸಲೂಬಹುದು. ಇದನ್ನು ಆತ್ಮವಿದ್ಯೆ ಎಂದು ಕರೆದಿದ್ದಾರೆ. ಆ ವಿದ್ಯೆಗೂ ನಿಯಮಗಳು, ಸೂತ್ರಗಳು, ತಂತ್ರಗಳು, ಯಂತ್ರಗಳೂ ಉಂಟು. ಅವುಗಳ ದಾಖಲೆಯೇ ಧರ್ಮ.

**ರಾಜಯೋಗ ಇತರ ವಿಜ್ಞಾನಶಾಸ್ತ್ರಗಳಂತೆಯೆ ಒಂದು ವಿಜ್ಞಾನಶಾಸ್ತ್ರ. ಇದೊಂದು ಮನಸ್ಸಿನ ವಿಶ್ಲೇಷಣೆ. ಅತೀಂದ್ರಿಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ ಆಧ್ಯಾತ್ಮಿಕ ಜೀವನವನ್ನು ಕಟ್ಟುವುದು.**

*ಸ್ವಾಮಿ ವಿವೇಕಾನಂದ*

ಸ್ಥಳದಾನ: ಉಗಮ ಎಂಟರ್‌ಪ್ರೈಸಸ್, ಚಾಮರಾಜನಗರ